ಶ್ರೀ ಕೆ. ವಿ. ಶಂಕರಗೌಡ.—ಹೈಬ್ರಿಡ್ ಜವಾರ್ ಕೆ.ಜಿ.ಗೆ ಮೂರು ರೂಪಾಯಿನಂತೆ ಕೊಡಲಾಗಿದೆ. ಇದಕ್ಕೂ ಕಡಿಮೆ ಬೆಲೆಗೆ ಕೊಡಬೇಕು ಎಂದು ಹೇಳುವುದು ಅರ್ಥವಿಲ್ಲದ ಮಾತು.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಸರ್ಕಾರದಿಂದ ಈಗ ಹೈಬ್ರಿಡ್ ಜವಾರ್ ಅಥವಾ ಮೇಜ್ ಸೀಡ್ಸ್ ಸಪ್ಲೈ ಮಾಡಿರುವುದು ಏನಿದೆ ಅದರಿಂದ ಸರಿಯಾದ ಬೀಜ ಬರಲಿಲ್ಲ ಎಂಬುದು ಗೊತ್ತೇ ?

ಶ್ರೀ ಕೆ. ವಿ. ಶಂಕರಗೌಡ.—ಅಂತಹ ದೂರು ಸರ್ಕಾರಕ್ಕೆ ಬಂದಿಲ್ಲ.

ಶ್ರೀ ಬಿ. ನಂಜಪ್ಪ.—ಸೀಡ್ ಕಾರ್ಪೊರೇಷನ್‌ನವರು ರೈತರಿಗೆ ಬೀಜವನ್ನು ಸಾಲವಾಗಿ ಕೊಡುತ್ತಾರೆ ಎಂದು ಹೇಳಿದಿರಿ. ಅವರು ಏನು ರೇಟ್ ಫಿಕ್ಸ್ ಮಾಡಿದ್ದಾರೆ ? ಇನ್ನೇನು ಸೌಲಭ್ಯ ಕೊಡುತ್ತಾರೆ ?

ಶ್ರೀ ಕೆ. ವಿ. ಶಂಕರಗೌಡ.—ಹೈಬ್ರಿಡ್ ಜವಾರ್‌ಗೆ ಕೆ. ಜಿ.ಗೆ 3 ರೂಪಾಯಿ ಫಿಕ್ಸ್ ಮಾಡಿದ್ದಾರೆ. ಪ್ರೊಸೆಸಿಂಗ್ ಯೂನಿಟ್‌ನಲ್ಲಿ ಯಾರಾದರೂ ಮಾಡುತ್ತೇವೆ ಎಂದು ಮುಂದೆ ಬಂದರೆ ಅವರಿಗೆ ಸಹಾಯ ಮಾಡುತ್ತಾರೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಶಕ್ತಿಮಾನ್ ಬೀಜಗಳನ್ನು ಬೆಳೆದಿದ್ದಾರೆ ಎಂಬುದನ್ನು ಹೇಳುವುದಕ್ಕೆ ಸಾಧ್ಯವೇ ?

Sri K. V. SHANKARA GOWDA.—Notice, Sir.

Anecut across Yagachi River near Belur

152. Sri B. NANJAPPA (Gandasi).—

Will the Minister for Public Works be pleased to state :—

(*a*) whether there is a proposal to construct an Anecut near Belur across Yagachi river ;

(*b*) whether any area of Hassan Taluk are going to be benefited from the above Project, if so, the area and its extent ?

A.—Sri VEERENDRA PATIL (Minister for Public Works).—

(*a*) No, but a reservoir.

(*b*) Yes, an extent of 27,858 acres is proposed to be irrigated.

ಶ್ರೀ ಬಿ. ನಂಜಪ್ಪ.—ಹಾಸನ ತಾಲ್ಲೂಕಿನಲ್ಲಿ 27,888 ಎಕರೆ ಜಮೀನು ನೀರಾವರಿಯಾಗ ಬಹುದು ಎಂದು ತಿಳಿಸಲಾಗಿದೆ ಇದು ಅಲ್ಲದೆ ಇನ್ನೂ ಹೆಚ್ಚು ಎಕರೆ ಭೂಮಿ ನೀರಾವರಿಗೆ ಬರುವುದಕ್ಕೆ ಸಾಧ್ಯವಿಲ್ಲವೇ ?

† ಶ್ರೀ ವೀರೇಂದ್ರ ಪಾಟೀಲ್.—ಒಟ್ಟು ಹಾಸನ ಜಿಲ್ಲೆಯಲ್ಲಿ 32 ಸಾವಿರ ಎಕರೆ ನೀರಾವರಿಯಾಗುತ್ತದೆ. ಹಾಸನ ತಾಲ್ಲೂಕಿನಲ್ಲಿ 27,888, ಬೇಲೂರು ತಾಲ್ಲೂಕಿನಲ್ಲಿ 3,760 ಎಕರೆ, ಆಲೂರು ತಾಲ್ಲೂಕಿನಲ್ಲಿ 382 ಎಕರೆ ನೀರಾವರಿಯಾಗುತ್ತದೆ.

ಶ್ರೀ ಬಿ. ನಂಜಪ್ಪ.—ಇನ್ನೂ ಕೂಡ ಲೆವಲ್ ಪರ್ಮಿಟ್ ಮಾಡುತ್ತದೆ ಮತ್ತು ಇನ್ನೂ ಹೆಚ್ಚು ಎಕರೆ ಪ್ರದೇಶ ನೀರಾವರಿಯಾಗುತ್ತದೆ, ಹಾಸನ ಮತ್ತು ಆಲೂರು ತಾಲ್ಲೂಕುಗಳಲ್ಲಿ ಎಂದು ತಮಗೆ ರೆಪ್ರಸೆಂಟೇಷನ್ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್. —ಆ ಸಮಾಚಾರ ನನ್ನಮುಂದೆ ಇಲ್ಲ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಯಗಚಿ ಜಲಾಶಯದಿಂದ 27,888 ಎಕರೆ ಜಮೀನು ನೀರಾವರಿಯಾಗಬಹುದು ಎಂದು ಉತ್ತರದಲ್ಲಿ ಹೇಳಿದ್ದೀರಿ, ಈ ಜಲಾಶಯದಿಂದ ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ಎಕರೆ ಜಮೀನಿಗೆ ನೀರಾವರಿಯಾಗುತ್ತದೆ ಎಂಬುದನ್ನು ತಿಳಿಸುವುದಕ್ಕಾಗುತ್ತದೆಯೇ ?

ಶ್ರೀ ವೀರೇಂದ್ರ ಪಾಟೀಲ್.—32 ಸಾವಿರ ಎಕರೆ ನೀರಾವರಿಯಾಗುತ್ತದೆ ಹಾಸನ ಜಿಲ್ಲೆಯಲ್ಲಿ ಎಂದು ಈಗಾಗಲೆ ಹೇಳಿದೆ.

ಶ್ರೀ ಚಿಕ್ಕೇಗೌಡ.—ಬೇಲೂರಿನ ಹತ್ತಿರ ಯಾವ ಸ್ಥಳದಲ್ಲಿ ಈ ಜಲಾಶಯದ ನಿರ್ಮಾಣ ಮಾಡುವುದಕ್ಕೆ ಅವಕಾಶ ಮಾಡಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್.—ಚಿಕ್ಕಬ್ಯಾದಿಗೆರೆ ಹತ್ತಿರ.

ಶ್ರೀ ಬಿ. ನಂಜಪ್ಪ.—ಇನ್ನೂ ಕೊಂಚ ಹೆಚ್ಚು ಸಾಗುವಳಿ ಮಾಡುವುದಕ್ಕೆ ಅವಕಾಶ ಇದ್ದರೆ, ಅದನ್ನು ಸರ್ವೆ ಮಾಡಿಸುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಇನ್ನೂ ಹೆಚ್ಚಿಗೆ ಅವಕಾಶವಿದೆಯೋ ಇಲ್ಲವೋ ಗೊತ್ತಿಲ್ಲ. ಪರಿಶೀಲನೆ ಮಾಡಿಸುತ್ತೇನೆ. ಮಾನ್ಯ ಸದಸ್ಯರು ಇನ್ನೂ ಹೆಚ್ಚು ಆಗುವುದಕ್ಕೆ ಅವಕಾಶ ಇದೆ ಎಂದು ಹೇಳಿದರೆ ಅದರ ಬಗ್ಗೆ ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ಬಿ. ನಂಜಪ್ಪ.—ಅವಕಾಶ ಇದೆ ರೆಪ್ರಸೆಂಟೇಷನ್ ಕೂಡ ಕೊಟ್ಟಿದ್ದೇವೆ, ಸರ್ವೆ ಮಾಡಿಸಿ ಕೊಡಬೇಕು, ರಿಪೋರ್ಟ್ ತರಿಸಬೇಕು, ಸ್ವಾಮಿ.

ಶ್ರೀ ವೀರೇಂದ್ರ ಪಾಟೀಲ್.—ಅದು ಏನಿದೆ ಅಂತ ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ಕೆ. ಎಂ. ತಮ್ಮಯ್ಯ.—ಈ ಜಲಾಶಯದಿಂದ ಮಾರಿಕಣಿವೆಗೂ ಅನುಕೂಲವಾಗುತ್ತದೆ ಎಂದು ಅನ್ನುತ್ತಾರೆ ಅದು ನಿಜವೇ ?

ಶ್ರೀ ವೀರೇಂದ್ರ ಪಾಟೀಲ್.— ಹೌದು.

Sri M. S. KRISHNAN.—Sir, I put question No. 700 *i.e.*, question No. 153 in the list of questions for the day.

Sri R. M. PATIL.—Answers are printed.

Industrial Disputes

153. **Sri M. S. KRISHNAN** (Malleswaram).—

Will the Minister for Labour, Animal Husbandry, Fisheries and Sericulture be pleased to state :—

(*a*) the number of industrial disputes which have not been referred to adjudication by the Government since 1st January 1966 ;

(*b*) whether reasons have been given by the Government in all cases ;

(*c*) whether the procedure adopted in respect of Public Sector undertakings is different from that in respect of other undertakings in this regard ?

A.—**Sri R. M. PATIL** (Minister for Home and Municipal Administration) [On behalf of **Sri D. Devaraj Urs** (Minister for Labour, Animal Husbandry, Fisheries and Sericulture)].—

(*a*) 464.